# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | | 240(1880) ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ. |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15/03/2022 |
| ಉತ್ತರಿಸುವವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| 1 | ರಾಜ್ಯದಲ್ಲಿ ಹಾಲಿ ಕೈಗಾರಿಕಾ ಆಸ್ತಿಗೆ ಸಂಬಂಧಿಸಿದಂತೆ ನೂತನ ಆಸ್ತಿ ತೆರಿಗೆ ನೀತಿಯನ್ನು ಜಾರಿಗೆ ತರಲಾಗಿದೆಯೇ: | ಹೌದು. ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976ಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಲ್ 5 ಶಾಸನ 2021 ದಿನಾಂಕ: 13.01.2022 ರಲ್ಲಿ ತಿದ್ದುಪಡಿ ತರಲಾಗಿದ್ದು, ಕೈಗಾರಿಕಾ ಆಸ್ತಿಗಳಿಗೆ ಪ್ರತ್ಯೇಕ ಆಸ್ತಿ ತೆರಿಗೆ ದರಗಳನ್ನು ನಿಗಧಿಪಡಿಸಲಾಗಿದೆ. |
| 2 | ತಂದಿದ್ದಲ್ಲಿ, ನೂತನ ಆಸ್ತಿ ತೆರಿಗೆ ನೀತಿಯ ಅನ್ವಯ ಘೋಷಿತ ಕೈಗಾರಿಕಾ ಪ್ರದೇಶ ವ್ಯಾಪ್ತಿ ಮತ್ತು ಅದನ್ನು ಹೊರತುಪಡಿಸಿದ ಕೈಗಾರಿಕೋಪಯೋಗಿ ಪ್ರದೇಶಗಳಿಗೆ ವಿಧಿಸಲಾಗಿರುವ ಆಸ್ತಿ ತೆರಿಗೆ ಶುಲ್ಕದ ಪ್ರಮಾಣ ಎಷ್ಟು: | ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 101 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976ರ ಕಲಂ 108 ರಲ್ಲಿ ವಿವರಿಸಿರುವಂತೆ ನಗರ ಸ್ಥಳಿಯ ಸಂಸ್ಥೆಗಳು ವಾಣಿಜ್ಯ ಕಟ್ಟಡಗಳಿಗೆ ವಿಧಿಸಿದ ಆಸ್ತಿ ತೆರಿಗೆ ದರದ ಶೇಕಡಾ 70 ಕ್ಕಿಂತ ಕಡಿಮೆ ಇಲ್ಲದಂತೆ ಕೈಗಾರಿಕಾ ಆಸ್ತಿಗಳಿಗೆ ಆಸ್ತಿ ತೆರಿಗೆ ದರ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.. |
| 3 | ಘೋಷಿತ ಕೈಗಾರಿಕಾ ಪ್ರದೇಶ ವ್ಯಾಪ್ತಿ ಹೊರತುಪಡಿಸಿದ ಕೈಗಾರಿಕೋಪಯೋಗಿ ಪ್ರದೇಶಗಳಲ್ಲಿರುವ ಕೈಗಾರಿಕೆ ಘಟಕಗಳು ಪಾವತಿಸಬೇಕಾದ ಆಸ್ತಿ ತೆರಿಗೆ ಪ್ರಮಾಣವನ್ನು ಆಯಾ ಸ್ಥಳೀಯ ಸಂಸ್ಥೆಗಳಿಂದ ನಿಗಧಿಪಡಿಸಬೇಕಾಗಿತ್ತದೆಯೇ? | ಹೌದು. ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 101 ಮತ್ತು ಕರ್ನಾಟಕ ಪೌರನಿಗಮಗಳ ಕಾಯ್ದೆ 1976ರ ಕಲಂ 108ರ ರನ್ವಯ ನಗರ ಸ್ಥಳಿಯ ಸಂಸ್ಥೆಗಳು ಆಸ್ತಿ ತೆರಿಗೆ ವಿಧಿಸಲು ಅಧಿಕಾರ ಹೊಂದಿರುತ್ತವೆ. |
| 4 | ನೂತನ ಆಸ್ತಿ ತೆರಿಗೆ ನೀತಿಯನ್ವಯ ಘೋಷಿತ ಕೈಗಾರಿಕಾ ಪ್ರದೇಶ ವ್ಯಾಪ್ತಿ ಹೊರತುಪಡಿಸಿದ ಕೈಗಾರಿಕೋಪಯೋಗಿ ಪ್ರದೇಶಗಳಲ್ಲಿರುವ ಕೈಗಾರಿಕೆಗಳಿಗೆ ಆಸ್ತಿ ತೆರಿಗೆ ನಿಗಧಿಪಡಿಸಿರುವಾಗ ಹಲವಾರು ಸ್ಥಳೀಯ ಸಂಸ್ಥೆಗಳಿಂದ ವಾಣಿಜ್ಯ ಕಟ್ಟಡಗಳಿಗೆ ಅನ್ವಯಿಸುವ ಶುಲ್ಕ ಪರಿಗಣಿಸಿ ಆಸ್ತಿ ತೆರಿಗೆ ನಿಗಧಿಪಡಿಸಲಾಗುತ್ತಿದ್ದು, ಇದರಿಂದ | ದಿನಾಂಕ: 13.01.2022ರ ಮುನಿಸಿಪಲ್ ಕಾಯ್ದೆಗಳ ತಿದ್ದುಪಡಿಯ ಪೂರ್ವದಲ್ಲಿ ಕೈಗಾರಿಕೆಗಳಿಗೆ ವಾಣಿಜ್ಯ ದರದಲ್ಲಿ ಆಸ್ತಿ ತೆರಿಗೆ ನಿಗಧಿಪಡಿಸಲಾಗುತ್ತಿತ್ತು, ಪ್ರಸ್ತುತ ಕಾಯ್ದೆಗಳ ತಿದ್ದುಪಡಿಯಂತೆ ಕೈಗಾರಿಕಾ ಆಸ್ತಿಗಳಿಗೆ ವಾಣಿಜ್ಯ ಕಟ್ಟಡಗಳಿಗೆ ವಿಧಿಸುವ ಆಸ್ತಿ ತೆರಿಗೆದರದ ಶೇಕಡಾ 70 ಕ್ಕಿಂತ ಕಡಿಮೆ ಇಲ್ಲದಂತೆ ಆಸ್ತಿ ತೆರಿಗೆ ದರ ವಿಧಿಸುವುದರಿಂದ ವಾಣಿಜ್ಯ ಕಟ್ಟಡಗಳಿಗಿಂತ |

| | | |
|---|---|---|
| | ಎಂ.ಎಸ್.ಎಂ.ಇ(Micro, Small & Medium Enterprises) ಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತಿರುವುದರಿಂದ ಮತ್ತು ರಾಜ್ಯದ ಎಲ್ಲೆಡೆ ತೆರಿಗೆ ದರದ ಪ್ರಮಣ ಏಕರೂಪದಲ್ಲಿ ಇಲ್ಲದಿರುವುದು ಗೊಂದಲಕ್ಕೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕಡಿಮೆ ಆಸ್ತಿ ತೆರಿಗೆ ನಿಗಧಿಪಡಿಸಲು ಅವಕಾಶ ಕಲ್ಪಿಸಲಾಗಿದೆ.<br>ಕಾಯ್ದೆಗಳಲ್ಲಿ ವಿಧಿಸಿರುವ ಕನಿಷ್ಠ ಹಾಗೂ ಗರಿಷ್ಠ ಮಿತಿಗೊಳಪಟ್ಟು ಆಯಾ ಪ್ರದೇಶದ ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ದರಗಳನ್ನಾಧರಿಸಿ ನಗರ ಸ್ಥಳೀಯ ಸಂಸ್ಥೆಗಳು ತೆರಿಗೆ ನಿರ್ಧರಿಸಲು ಅಧಿಕಾರ ಹೊಂದಿರುವುದರಿಂದ ರಾಜ್ಯದದ್ಯಾಂತ ಏಕ ರೀತಿಯ ಆಸ್ತಿ ತೆರಿಗೆ ದರ ಇರುವುದಿಲ್ಲ. |
| 5 | ಬಂದಿದ್ದಲ್ಲಿ, ಈ ಗೊಂದಲವನ್ನು ಪರಿಹರಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಏಕ ರೀತಿಯ ಆಸ್ತಿ ತೆರಿಗೆದರ ವಿಧಿಸುವ ಪ್ರಸ್ತಾಪವಿರುವುದಿಲ್ಲ. |

ಸಂಖ್ಯೆ: ನಅಇ 90 ಜಿಇಎಲ್ 2022(ಇ)

(signature)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು